# ನಟನೆಗಾಗಿ ಮನೆ ಬಿಟ್ಟು ಬಂದೆ

**ಆರ್ಯನ್ ಸೂರ್ಯ**
ಸ್ಟಾರ್ ಸುವರ್ಣದ
'ಜೀವ ಹೂವಾಗಿದೆ'
ಮದನ್



◆ **ನೀವು ಮನೆ ಬಿಟ್ಟು ಓಡಿ ಬಂದಿದ್ದು ಏಕೆ?**

ಅಮ್ಮ ವಿಜಯಮ್ಮ, ತಂದೆ ವೆಂಕಟರಾಮಯ್ಯ. ನಮ್ಮದು ಕೆಳಮಧ್ಯಮ ವರ್ಗದ ಕುಟುಂಬ. ತಂದೆ ಟ್ಯಾಕ್ಸಿ ಚಾಲಕರಾಗಿದ್ದರು. ನಮ್ಮ ವಂಶದಲ್ಲಿ ಯಾರೊಬ್ಬರೂ ನಟನಾರಂಗ ಕಂಡವರಲ್ಲ. ಚಿಕ್ಕಂದಿನಿಂದಲೂ ಸಿನಿಮಾ ನೋಡುವ ಅಭ್ಯಾಸವನ್ನು ನಮ್ಮ ತಂದೆ ರೂಢಿಸಿದರು. ಅವರಿಗೆ ಇಂಗ್ಲಿಷ್ ಸಿನಿಮಾಗಳನ್ನು ನೋಡುವ ಹವ್ಯಾಸ ಇತ್ತು. ಸಿನಿಮಾ ನೋಡುತ್ತಾ ಇದ್ದವನಿಗೆ ಸಿನಿಮಾ ತೆರೆಯ ಮೇಲೆ ಬರಬೇಕು ಎನ್ನುವ ಆಸೆ ಅಂಕುರವಾಯಿತು. ಅದನ್ನು ಈಡೇರಿಸಿಕೊಳ್ಳಲು ಮನೆಬಿಟ್ಟು ಓಡಿಬಂದೆ. ಅದಕ್ಕೆ ಕಾರಣ ಆಗಿದ್ದು ನಾನು ಬಿಎಸ್ಸಿ ಓದ್ತಾ ಇದ್ದಾಗ ಬ್ರೂಸ್‌ಲೀ ಸಿನಿಮಾ ಟೀವಿಯಲ್ಲಿ ಬಂದಿತ್ತು. ನಮ್ಮ ಮನೆ ಕೇಬಲ್ ಕಟ್ ಆಗಿದ್ದರಿಂದ ಬೇರೆಯವರ ಮನೆಗೆ ಹೋಗಿದ್ದೆ. ಮರುದಿನ ಪರೀಕ್ಷೆ ಇತ್ತು. ಮನೆಯಲ್ಲಿ ಬೈದರು. ಅವತ್ತೇ ಮನೆ ಬಿಟ್ಟು ಬೆಂಗಳೂರಿಗೆ ಬಂದೆ. ನಾನು ಬಾಲ್ಯದಿಂದಲೂ ಫಸ್ಟ್‌ಕ್ಲಾಸ್ ವಿದ್ಯಾರ್ಥಿ. ಪದವಿ ಮಾಡಿದರೆ ಕೆಲಸಕ್ಕೆ ಕಳುಹಿಸುತ್ತಾರೆ ಎಂದು ಅರ್ಧಕ್ಕೆ ನಿಲ್ಲಿಸಿದೆ.

◆ **ತಬ್ಬಲಿಯಾಗಿ ಬಂದ ನಿಮಗೆ ಬೆಂಗಳೂರು ಮಡಿಲು ಆಗಿದ್ದು ಹೇಗೆ?**

ನೆಲಮಂಗಲದಲ್ಲಿ ನಮ್ಮ ಮಾವನವರ ಮನೆಯಲ್ಲಿ ಎರಡು ದಿನ ಇದ್ದೆ. ನಂತರ ನವರಂಗ್ ಬಳಿ ಗೆಳೆಯರ ರೂಮಿಗೆ ಬಂದೆ. 'ಅಮೃತಧಾರೆ'ಯಲ್ಲಿ ಮುಖ ಕಾಣಿಸಿಕೊಳ್ಳಲು ಅವಕಾಶ ಸಿಕ್ಕಿತು. ಬೆಂಗಳೂರಿಗೆ ಬಂದು ನಾಲ್ಕೇ ದಿನದಲ್ಲಿ ಆ ಅವಕಾಶ ನನ್ನ ಆಸೆ ಮತ್ತಷ್ಟು ಬಲಿಯಲು ಕಾರಣ ಆಯ್ತು. ಗಾಂಧಿನಗರದ ಬೀದಿ ಬೀದಿ ಸುತ್ತುತ್ತಿದ್ದ ನನಗೆ ಎಲ್ಲಾದರೂ ಸಿನಿಮಾ ಪದ ಕೇಳಿದರೆ ಕಿವಿ ನಿಮಿರುತ್ತಿದ್ದವು. ಅವರಲ್ಲಿ ನಾನು ಕಲಾವಿದ ಆಗಬೇಕು ಸಹಾಯ ಮಾಡಿ ಎಂದು ಬೇಡಿಕೊಳ್ಳುತ್ತಿದ್ದೆ. ಅವರು ಏನಾದರೂ ಮಾಹಿತಿ ನೀಡುತ್ತಿದ್ದರು. ಇಲ್ಲವೇ ಯಾರನ್ನಾದರೂ ಸಂಪರ್ಕಿಸಲು ಹೇಳುತ್ತಿದ್ದರು. ಹಾಗೆ ಹುಡುಕುತ್ತಿದ್ದವನಿಗೆ 'ಮಂಡ್ಯ'ದಲ್ಲಿ ಎರಡು ಡೈಲಾಗ್ ಹೇಳುವ ಪಾತ್ರ ನಂತರ 'ಹುಬ್ಬಳ್ಳಿ'ಯಲ್ಲೂ ಮಾತನಾಡುವ ಪಾತ್ರ ಸಿಕ್ಕಿತು. ಅದಾದ ಮೇಲೆ 'ಪಾಂಡವರು' 'ಸವಿ ಸವಿ ನೆನಪು' ಚಿಕ್ಕಪುಟ್ಟ ಪಾತ್ರಗಳಿಗೆ ಬಣ್ಣ ಹಚ್ಚಿದೆ. 'ಧೀಮಂತ' ಕಲಾತ್ಮಕ ಸಿನಿಮಾದಲ್ಲಿ ಮುಖ್ಯಪಾತ್ರ ಮಾಡಿದೆ. 'ಸಿಂಚನ' 'ಫ್ಲ್ಯಾಶ್‌ಬ್ಯಾಕ್' 'ಬೆಳ್ಳಿಮೋಡದ ಅಂಬರ' ಮುಖ್ಯ ಖಳನಟನಾಗಿದ್ದೆ. 'ಕೌದಿ'ಯಲ್ಲಿ ಬಿ. ಜಯಶ್ರೀ ಅವರ ಮಗನಾಗಿ ಅಭಿನಯಿಸಿದ್ದೆ.

◆ **ಟೀವಿಗೆ ಬಂದಿದ್ದು ಹೇಗೆ?**

'ಅಲ್ಲಿದೆ ನಮ್ಮ ಮನೆ, ಇಲ್ಲಿಗೆ ಬಂದೆ ಸುಮ್ಮನೆ' ಎಂಬಂತೆ ಹೊಟ್ಟೆ ಪಾಡಿಗೆ ಬಂದ ನನಗೆ ಸಿನಿಮಾನೇ ಮುಖ್ಯ. ಇಲ್ಲಿ ಹಣಕಾಸಿನ ದೃಷ್ಟಿಯಿಂದ ಚೆನ್ನಾಗಿದೆ. ಸಿನಿಮಾದಲ್ಲಿ ಅವಕಾಶ ಕೇಳಲು ಹೋದರೆ ಏನು ಕೊಡ್ತೀಯಾ ಎಂದು ಕೇಳುತ್ತಿದ್ದರು. ಇಲ್ಲಿ ಪೇಮೆಂಟ್ ಎಷ್ಟು ಬಯಸುತ್ತೀರಿ ಎಂದು ಕೇಳುತ್ತಾರೆ. ಪಾತ್ರ ಎಷ್ಟೇ ಚಿಕ್ಕದಿರಲಿ, ಗೌರಯುತವಾಗಿ ಸಂಭಾವನೆ ಸಂದಾಯವಾಗುತ್ತದೆ. ಆ ಕಾರಣಕ್ಕೆ ಇದು ತುಂಬ ಇಷ್ಟ ಆಗುತ್ತದೆ. ಗೆಳೆಯ ಬಲವಂತಕ್ಕಾಗಿ ಉದಯದ 'ಚಂದನದ ಗೊಂಬೆ'ಗೆ ಆಡಿಷನ್ ನೀಡಿದೆ. ಅದರಲ್ಲಿ ಮುಖ್ಯಪಾತ್ರವನ್ನು ಮಾಡುವ ಭಾಗ್ಯ ನನಗೆ ಸಿಕ್ಕಿತು. ಕುಡುಕನ ಪಾತ್ರವಾದ ಅದು ಪಾಸಿಟಿವ್– ನೆಗೆಟಿವ್ ಎರಡೂ ಗುಣಗಳನ್ನು ಹೊಂದಿತ್ತು. 'ಜೈ ಆಂಜನೇಯ'ದಲ್ಲೂ ಮಾಡಿದೆ. 'ರಕ್ತಾಕ್ಷ' ರಾಕ್ಷಸ 'ಹರಹರ ಮಾಹದೇವ'ದಲ್ಲಿ ರಾವಣನಾಗಿದ್ದೆ. ಆ ಪಾತ್ರಕ್ಕೆ ಐದಾರು ಬಾರಿ ಆಡಿಷನ್ ಮಾಡಿದ್ದರು. ಈಗ 'ಜೀವ ಹೂವಾಗಿದೆ'. ಏನೂ ಆಗದಿದ್ದರೂ ನಟನಾಗಿಯೇ ಉಳಿಯುತ್ತೇನೆ ಎನ್ನುವ ಸಮಾಧಾನ ನನ್ನನ್ನು ಇಲ್ಲಿ ಕಟ್ಟಿ ನಿಲ್ಲಿಸಿದೆ. ಸಿನಿಮಾ– ಟೀವಿ ಎಲ್ಲಾದರೂ ನಟನೆಯನ್ನೇ ಮಾಡುತ್ತೇನೆ ಎಂದು ನನ್ನ ಮನಃಸ್ಥಿತಿಯನ್ನು ಪರಿವರ್ತನೆ ಮಾಡಿಕೊಂಡಿದ್ದೇನೆ. ಸಿನಿಮಾದಲ್ಲಿ ಅವಕಾಶ ಸಿಕ್ಕರೆ ಖಂಡಿತ ಅದನ್ನೂ ಮಾಡುತ್ತೇನೆ. ನಿರ್ಮಾಪಕ ರಾಘವೇಂದ್ರ ರಾಜಕುಮಾರ್ ನನಗೊಂದು ಒಳ್ಳೆಯ ಅವಕಾಶ ಕೊಟ್ಟಿದ್ದಾರೆ ಅದನ್ನು ಚೆನ್ನಾಗಿ ಉಪಯೋಗಿಸುವುದು ನನಗಿರುವ ಗುರಿ.

◆ **ಬೆಂಗಳೂರಿನ ಅನುಭವ ಹೇಳುವುದಾದರೆ**

ಟೈಲ್ಸ್ ಅಂಗಡಿಯಲ್ಲಿ ಮೊದಲು ಕೆಲಸಕ್ಕೆ ಸೇರಿದೆ. ನನಗೆ ನಟನಾಗುವ ಏಕೈಕ ಉದ್ದೇಶ ಇತ್ತು. ಅದಕ್ಕಾಗಿ ಬದುಕಬೇಕು ಎಂದು ಕಳ್ಳತನವನ್ನು ಬಿಟ್ಟು ಎಲ್ಲ ರೀತಿಯ ಕೆಲಸಗಳನ್ನು ಬೆಂಗಳೂರಿನಲ್ಲಿ ಮಾಡಲು ಸಾಧ್ಯವಾಗಿದೆ. ಮನೆಗಳನ್ನು ಶಿಫ್ಟ್ ಮಾಡುವುದು, ಗೋಡೆಗೆ ಬಣ್ಣ ಹಚ್ಚುವುದು ಕಂಪ್ಯೂಟರ್ ರಿಪೇರಿಯೂ ಸೇರಿದಂತೆ ಹೊಸ ಹೊಸ ಕೆಲಸವನ್ನು ಇಲ್ಲಿ ಕಲಿಯಲು ಸಾಧ್ಯವಾಗಿದೆ. ವಿಡಿಯೊಗ್ರಫಿ ಕಲಿತು ಸಭೆ ಸಮಾರಂಭಗಳಲ್ಲಿ ಕೆಲಸ ಮಾಡಿದೆ. ಅದಾದ ಮೇಲೆ ಸ್ಟಿಲ್ ಫೋಟೊಗ್ರಫಿ ಮಾಡಿದ್ದೇನೆ. ವಿಡಿಯೊ ಎಡಿಟಿಂಗ್ ಮಾಡಿದೆ. ಹೀಗೆ ಕೆಲಸ ಏನೇ ಸಿಕ್ಕರೂ 'ಎಷ್ಟು ಕೊಡ್ತಿಯಾ' ಎನ್ನುವುದು ಮತ್ತು ಮಾಡುವುದಷ್ಟೇ ಗೊತ್ತಿತ್ತು. ನಾನು ಹತ್ತಾರು ಸಿನಿಮಾದಲ್ಲಿ ನಟಿಸಿದ್ದರೂ ಯಾವುದೇ ಸಿನಿಮಾದಲ್ಲೂ ಸಂಭಾವನೆಯನ್ನು ಪಡೆದಿಲ್ಲ. ಖರ್ಚಿಗೆಂದು ಕೊಡುವ ದುಡ್ಡೇ ಜೀವನದ್ರವ್ಯ.

■ **ರಾಘವೇಂದ್ರ ಕೆ.**